ಸಾಂತ್ವನ ಹೇಳಿ, ಸಂಸಾರದ ಸಂಬಂಧಗಳನ್ನು ತಿಳಿಸಿ, ಗಂಡ ಹೆಂಡರಿಬ್ಬರೂ ಸಂಸಾರವನ್ನು ಸರಿಸಮವಾಗಿ ಸರಿದೂಗಿಸಿಕೊಂಡು ಹೋಗುವಂತೆ ತಿಳಿಯ ಹೇಳುವ ಕೌಶಲ್ಯವಿದ್ದ ಅನುಭವಿ ವಕೀಲ. ಅನ್ನಪೂರ್ಣ ಮೌನವಹಿಸಿ ಅನ್ಯಮನಸ್ಕಳಾದದ್ದನ್ನು ಕಂಡು, ತಾನು ಅವಳಿಗೆ ತಿಳಿಹೇಳುವುದಕ್ಕೆ ಈಗ ಸರಿಯಾದ ಸಮಯವೆಂದು ಅಲ್ಲಿಂದ ಸ್ವಲ್ಪ ದೂರಕ್ಕೆ ಅವಳನ್ನು ಕರೆದು ಅವರ ಕುಟುಂಬದ ಭವಿಷ್ಯದ ಬಗ್ಗೆ ಎಳೆ ಎಳೆಯಾಗಿ ತನ್ನ ಅನುಭವದ ಮಾತುಗಳನ್ನು ತೆರೆದಿಟ್ಟ. ತನ್ನ ವೃತ್ತಿ ಜೀವನದಲ್ಲಿ ಕಂಡ ನೂರಾರು ಉದಾಹರಣೆಗಳನ್ನು ಘಟನೆ ಸಹಿತ ವಿವರಿಸಿದ. 'ಇಂತಹ ಜೋಡಿಗಳು ಅವರ ತೃಷೆ ತೀರಿದ ಬಳಿಕ ಊಟದ ಎಲೆಯನ್ನು ಉಂಡ ಬಳಿಕ ಬಿಸಾಕಿದಂತೆ ಹೆಣ್ಣುಗಳನ್ನು ಬಳಸಿಕೊಂಡ ನಂತರ ಸಂಬಂಧ ಕಡಿದುಕೊಳ್ಳುವ ಗಂಡಸಿನ ಮನಸ್ಥಿತಿಯನ್ನು ಮತ್ತು ಅವರು ಇಂತಹ ವಿಷಯದಲ್ಲಿ ಭಾವನಾತ್ಮಕವಾಗಿ ಹೆಚ್ಚು ಧೃಡರಾಗಿ ನಿಂತು ಜೀವನ ಸಾಗಿಸುವ ಆಲೋಚನೆಯಲ್ಲಿ ನಿರಂತರತೆ ಸಾಧಿಸಲಾರರು. ನಿನ್ನನ್ನು ಅನ್ಯಳಾಗಿಯೇ ನೋಡುತ್ತಾ ಅರ್ಧ ದಾರಿಯಲ್ಲಿಯೇ ಬಿಟ್ಟು ಹೋಗಬಹುದು! ನಿನ್ನ ಸಂಸಾರದ ಬದುಕಿಗೆ ನೀನೇ ಕೊಳ್ಳಿ ಇಟ್ಟುಕೊಂಡಂತಾಗುತ್ತದೆ. ಅತ್ತ, ಅವನ ಜೊತೆಗಿನ ಜೀವನವೂ ಇಲ್ಲದೆ, ಇತ್ತ ಕರುವಿನಕಟ್ಟೆಯ ಗಂಡ, ಮಕ್ಕಳನ್ನೂ ಸೇರಲಾರದೇ ನಿನ್ನ ಜೀವನವನ್ನು ಅತಂತ್ರ ಮಾಡಿಕೊಳ್ಳುತ್ತಿಯಾ. ನಿನ್ನ ಈ ಸುಂದರವಾದ ಸಂಸಾರವನ್ನು ಹಾಳು ಮಾಡಿಕೊಳ್ಳಬೇಡ. ನಿನ್ನ ಗಂಡ ಕರಿವೀರಪ್ಪ ಈಗಲೂ ನಿನ್ನ ಬಗ್ಗೆ ಒಳ್ಳೆಯ ಭಾವನೆಯನ್ನೇ ಹೊಂದಿದ್ದಾನೆ. ಆತನದು ಹಾಲಿನಂತಹ ಮನಸ್ಸು. ನಿನ್ನಲ್ಲಿ ಯಾವುದೇ ತಪ್ಪನ್ನು ಈ ಕ್ಷಣಕ್ಕೂ ಕಾಣದ ಮನಸ್ಸು ಅವನಿಗಿದೆ. ಯಾರೋ ಮಾಡಿದ ಕುತಂತ್ರ, ಮೋಡಿಗೆ ಒಳಗಾಗಿ ಹೋಗಿದ್ದಾಳೆಂದೇ ತಿಳಿದಿದ್ದಾನೆ. ಸರಿಯಾಗಿ ಆಲೋಚಿಸಿ ನಿರ್ಧಾರ ಮಾಡು ನಿನ್ನ ಭವಿಷ್ಯ ನಿನ್ನ ಕೈಯಲ್ಲಿದೆ' ಎಂದು ತನ್ನ ಅನುಭವದ ನುಡಿಗಳನ್ನ ಹೇಳಿ ಆಕೆಯನ್ನು ಒಂಟಿಯಾಗಿ ಬಿಟ್ಟು ಪೊಲೀಸ್‌ನವರೆಡೆಗೆ ಹೋದ.



ರಾತ್ರಿ ಎಷ್ಟೋ ಹೊತ್ತಿನ ಬಳಿಕ ಮಕ್ಕಳ ಬಾಡಿದ ಮುಖಗಳನ್ನು ದಿಟ್ಟಿಸಿ ನೋಡಲು ಆರಂಭಿಸಿದ ಅನ್ನಪೂರ್ಣ, ನಿಧಾನವಾಗಿ ಅವಳ ಮನಸ್ಸಿನ ಆಲೋಚನೆಗಳು ಪರಿವರ್ತನೆಗೆ ತೊಡಗಿದವು. ಮಕ್ಕಳ ಶಿಕ್ಷಣ, ಆರೈಕೆ, ಮಗಳು ಮೈನೆರೆಯುವ ಸಮಯದಲ್ಲಿ ತಾನಿದ್ದು ಮಾಡಬೇಕಾದ ಕಾರ್ಯಗಳು, ಮಕ್ಕಳ ಸಂಭ್ರಮದ ಘಳಿಗೆಗಳನ್ನೆಲ್ಲಾ ನೆನೆದು ಅವಳ ಮನಸ್ಸು ಉದ್ವಿಗ್ನಗೊಂಡಿತು. ಕಣ್ಣಾಲಿಗಳೂ ತುಂಬಿಕೊಂಡವು. ಮನಸ್ಸು ಭಾರವಾಗಿ ಎಲ್ಲರಿಂದ ದೂರ ಸರಿದು ಮುಖ ತಿರುಗಿಸಿ ಒಬ್ಬಳೇ ನೆಲ ದಿಟ್ಟಿಸುತ್ತಾ ನಿಂತಳು. ಚಡಪಡಿಸಿ ಒಮ್ಮೆ ಕುಕ್ಕರಗಾಲಲ್ಲಿ ಕುಳಿತುಕೊಳ್ಳುವುದು, ಮತ್ತೊಮ್ಮೆ ಎಲ್ಲರಿಂದ ಇನ್ನಷ್ಟು ದೂರ ದೂರಕ್ಕೆ ಹೋಗಿ ಕಾಲಿನಿಂದ ಹೆಬ್ಬೆರಳಿನಿಂದ ನೆಲ ಕೆರೆಯುತ್ತಾ ನಿಲ್ಲುವುದು ಹೀಗೆ ಮಾಡುತ್ತಿದ್ದಳು. ಇಷ್ಟು ದಿನ ಮನದ ಭ್ರಾಂತಿಯ ಪಟಲದಲ್ಲಿ ಕುಣಿದ ನವಿಲ ನರ್ತನದಲ್ಲಿ ಗರಿಗೆದರಿದ ಬಣ್ಣ ಬಣ್ಣದ ಗರಿಗಳು ಮೆಲ್ಲಗೆ ಬಣ್ಣ ಮಾಸುತ್ತಾ ಮುದುಡಿ ಮಲಗಿದಂತೆ ಭಾಸವಾಯಿತು ಅವಳಿಗೆ. ಆಕೆಯಲ್ಲಿದ್ದ ಆ ವ್ಯಾಮೋಹದ ಪಕಳೆಗಳು ಒಂದೊಂದೇ ಉದುರಿಬಿದ್ದವೆಂದು ಕಾಣುತ್ತದೆ! ಆಕೆಯ ಮನಸ್ಸಿನ ಹುತ್ತದಲ್ಲಿ ಸೇರಿಕೊಂಡಿದ್ದ ಮೋಹದ ಹಾವು ಹೊರಬಂದಿತು. ಆ ಮೋಹದ ಜಾಲ ಕಳಚಿಬೀಳುತ್ತಿದ್ದ ಹಾಗೆ ಅವಳ ಕಣ್ಣಿಂದ ದಳದಳನೇ ನೀರು ಕೆನ್ನೆಯ ಮೇಲಿಂದಿಳಿದವು. ಶ್ರೀಕಂಠ ನನ್ನ ಜೊತೆ ಮೈಸೂರಿಗೆ ಬಂದಿದ್ದರೂ ಅವನ ಮನೆಯಿಂದ ಒಂದು ಪೈಸೆ ಹಣವೂ ತರದೇ ತಾನು ತೆಗೆದುಕೊಂಡು ಹೋದ ಹಣದಲ್ಲಿಯೇ ಉಳಿಯಲಿಕ್ಕೆ ಲಾಡ್ಜ್‌ನಲ್ಲಿ ರೂಮು, ಊಟೋಪಚಾರ, ಸಿನೆಮಾ ಇತರೆಲ್ಲದ್ದಕ್ಕೂ ಹಣ ಖರ್ಚು ಮಾಡಿಸಿದ್ದು ನೆನಪಾಯಿತು. ಹಣ ಮುಗಿಯಲಿಕ್ಕೆ ಬಂದಿದ್ದರೂ ಮುಂದಿನದನ್ನು ಏನೂ ಯೋಚನೆ ಮಾಡದೇ ಇರುತ್ತಿದ್ದುದನ್ನು, ಈಕೆಯೇ ಮುಂದಾಗಿ ಸಿಟಿಯಲ್ಲಿ ಕೆಲಸ ಹುಡುಕುವಂತೆ ತಿಳಿಸಿದರೂ ನಿರ್ಲಕ್ಷ್ಯದಿಂದ ಇದ್ದು ಬರೀ ಮೋಜಿನಲ್ಲಿ ಕಾಲ ಕಳೆಯುತ್ತಿದ್ದುದನ್ನು ನೆನೆದಳು. ಒಮ್ಮೊಮ್ಮೆ ತನ್ನ ಮಕ್ಕಳನ್ನು ನೋಡಬೇಕೆಂಬ ಕಾತುರ ಅವಳಲ್ಲಿ ಉಕ್ಕುತ್ತಿತ್ತು. ಈ ಮಾತನ್ನು ಶ್ರೀಕಂಠನ ಹತ್ತಿರ